ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹೊನ್ನಾಳಿ

**ಸಿ.ಸಿ. ನಂ.31/2022**

ಪಿರ್ಯಾದುದಾರರು ಃ ನ್ಯಾಮತಿ ಪೊಲೀಸರು.

- ವಿರುದ್ಧ -

ಆರೋಪಿತರು

1. ಮಲ್ಲಿಕಾರ್ಜುನಪ್ಪ ಬಿನ್ ರುದ್ರಪ್ಪ, 60 ವರ್ಷ,
2. ಕುಬೇಂದ್ರಪ್ಪ ಬಿನ್ ರುದ್ರಪ್ಪ, 58 ವರ್ಷ,
3. ಮಂಜಪ್ಪ ಬಿನ್ ರುದ್ರಪ್ಪ, 56 ವರ್ಷ,
4. ಗಣೇಶ ಬಿನ್ ಕುಬೇಂದ್ರಪ್ಪ, 24 ವರ್ಷ,
5. ಕಾರ್ತಿಕ ಬಿನ್ ಕುಬೇಂದ್ರಪ್ಪ, 23 ವರ್ಷ,
6. ಯಶೋಧಮ್ಮ ಕೋಂ ಮಲ್ಲಿಕಾರ್ಜನಪ್ಪ , 58 ವರ್ಷ,
7. ಕಿರಣ್ ಪಾಟೀಲ್ ಬಿನ್ ಮಲ್ಲಿಕಾರ್ಜನಪ್ಪ, 34 ವರ್ಷ,
8. ಶಾಂತಮ್ಮ ಕೋಂ ಕುಬೇಂದ್ರಪ್ಪ, 51 ವರ್ಷ,
9. ಬೇಬಿ ಬಿನ್ ಮಂಜುನಾಥ, 44 ವರ್ಷ,

ಎಲ್ಲರ ವಾಸಃ ಕೋಟೆಹಾಳ್ ಗ್ರಾಮ,
ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ದೋಷಾರೋಪಣೆ ಃ

ಶ್ರೀ. ಪುಣ್ಯಕೋಟಿ ಎಸ್ ಎನ್., ಬಿ.ಎ., ಎಲ್‌ಎಲ್.ಬಿ. ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊನ್ನಾಳಿ ಆದ ನಾನು ಮಾಡುತ್ತಿರುವ ದೋಷಾರೋಪಣೆ ಏನೆಂದರೆಃ

ದಿನಾಂಕಃ **05.01.2021** ರಂದು ಬೆಳಗ್ಗೆ **10.30** ಗಂಟೆ ಸಮಯದಲ್ಲಿ ನ್ಯಾಮತಿ ಠಾಣಾ ಸರಹದ್ದಿನ ಕೋಟೆಹಾಳ್ ಗ್ರಾಮದ ಸರ್ವೆ ನಂ.**23/7** ರಲ್ಲಿ **0.28** ಗುಂಟೆ ಜಮೀನಿನಲ್ಲಿ ಆರೋಪಿಗಳಾದ ನೀವು ಸಾಕ್ಷಿ **1** ರವರು ಜಮೀನಿನಲ್ಲಿ ನನಗೂ ಭಾಗ ಇದೆ ಎಂದು ಕೇಳಿದ್ದಕ್ಕೆ

ಆರೋಪಿ-1 ರಿಂದ 9 ಆದ ನೀವುಗಳು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಹೋಗಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.143 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

2. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ-1 ರಿಂದ 9 ಆದ ನೀವುಗಳು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ದೊಂಬಿಯನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.147 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆ ಯಲ್ಲಿ ಮಾಡಿರುತ್ತೀರಿ.

3. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ-1 ರಿಂದ 9 ಆದ ನೀವುಗಳು ಅಪರಾಧ ಮಾಡುವ ಏಕೋದ್ದೇಶದಿಂದ ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಗಲಾಟೆ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.148 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

4. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ-1 ರಿಂದ 9 ಆದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಸಾಕ್ಷಿ-1 ರವರಿಗೆ ಸೂಳೆ ಮನಗೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಗೆ ಭಂಗವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.504 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

5. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ-1 ರಿಂದ 9 ಆದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಸಾಕ್ಷಿ-1 ರವರ ಮೇಲೆ ಗಲಾಟೆ ಮಾಡಲು ಒಬ್ಬರಿಗೊಬ್ಬರು ಪ್ರಚೋದನೆ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.114 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

6. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ-1 ರಿಂದ 9 ಆದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಸಾಕ್ಷಿ 1 ರವರನ್ನು ನೆಲಕ್ಕೆ ಬೀಳಿಸಿ ಕೈಕಾಲುಗಳಿಂದ ಮೈಕೈಗೆ, ನಿಮ್ಮ ಪೈಕಿ ಆರೋಪಿ-2 ಮತ್ತು 3 ಆದ ನೀವುಗಳು ಕಣಿಗೆಗಳಿಂದ ಸಾಕ್ಷಿ-1 ರವರ ಮೈಕೈಗೆ ಹೊಡೆದು, 1ನೇ ಆರೋಪಿಯಾದ ನೀವು ಕಬ್ಬಿಣದ ಮಚ್ಚಿನಿಂದ ಸಾಕ್ಷಿ 1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯಪಡಿಸಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.324 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

7. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ-1 ರಿಂದ 9 ಆದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಸಾಕ್ಷಿ-1 ರವರನ್ನು ನೆಲಕ್ಕೆ ಬೀಳಿಸಿ ಕೈಕಾಲುಗಳಿಂದ ಮೈಕೈಗೆ ಹೊಡೆದಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.323 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

8. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ-1 ರಿಂದ 9 ಆದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಸಾಕ್ಷಿ 1 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.506 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.)

ಸ್ಥಳಃ ಹೊನ್ನಾಳಿ
ದಿನಾಂಕಃ 23.03.2026

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹೊನ್ನಾಳಿ.